ಎಂದು ಅಧ್ಯಕ್ಷರು ಹೇಳಿದರು. ಹಾಗಾಗಿ ಸರ್ವಾನುಮತದಿಂದ ಮೂಸಬ್ಬನೇ ಸಮಿತಿಯ ಅಧ್ಯಕ್ಷನಾದ. ಎಲ್ಲರ ಮುಖದ ಮೇಲೂ ಮುಗುಳ್ನಗು ಮೂಡಿತು.

ಫಾರೆಸ್ಟ್ ಡಿಪಾರ್ಟ್‌ಮೆಂಟನ್ನುದ್ದೇಶಿಸಿ ಬೇರೆಯೇ ಒಂದು ಅರ್ಜಿಯನ್ನು ಬರೆಯಲಾಯಿತು. ಅದಕ್ಕೆ ಮೂಸಬ್ಬನ ಅರ್ಜಿಯ ಕ್ಸೆರಾಕ್ಸ್ ಪ್ರತಿಯನ್ನು ಲಗತ್ತಿಸಿ ಮೂಸಬ್ಬ ಅಧ್ಯಕ್ಷ ಎಂದು ಸಹಿ ಮಾಡಿ ಉಳಿದವರೂ ರುಜು ಹಾಕುವಂತೆ ಕೊಟ್ಟ. ಪಂಚಾಯತ್ ಅಧ್ಯಕ್ಷರು, 'ಇದನ್ನು ನೀವೇ ಹೋಗಿ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಕೊಡುತ್ತೀರೋ ಅಥವಾ ಸಮಿತಿಯ ಸದಸ್ಯರೆಲ್ಲ ಬರಬೇಕಾ?' ಎಂದು ಧಾರಾಳ ಮನಸ್ಸಿನಿಂದ ಕೇಳಿದರು. ಇಡಿಯ ಸಮಿತಿಯಲ್ಲಿ ಅವರೊಬ್ಬರೇ ಮೂಸಬ್ಬನನ್ನು ಬಹುವಚನದಿಂದ ಸಂಬೋಧಿಸುವುದು. ಹಾಗಾಗಿ ಮೂಸಬ್ಬ ಕೃತಜ್ಞತೆಯಿಂದ, 'ನನಗೆ ಇಂಥದ್ದರಲ್ಲೆಲ್ಲ ಅನುಭವ ಎಂಥದ್ದುಂಟು? ನೀವೂ ಬರಬೇಕು' ಎಂದ.

ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಆಫೀಸಿರುವುದು ತಾಲ್ಲೂಕು ಕೇಂದ್ರದಲ್ಲಿ. ಹಾಗಾಗಿ ಸಮಿತಿಯ ಐದು ಜನರೂ, ಅಂದರೆ ಪಂಚಾಯತ್ ಅಧ್ಯಕ್ಷರನ್ನೂ ಒಳಗೊಂಡು, ಅವರ ಕಾರಿನಲ್ಲಿಯೇ ತಾಲ್ಲೂಕು ಕೇಂದ್ರಕ್ಕೆ ಹೋಗಬೇಕಾಯಿತು. ಆದರೆ ಅದಕ್ಕೆ ಪೆಟ್ರೋಲಿನ ಖರ್ಚನ್ನು ಮೂಸಬ್ಬನ ಕೈಯಿಂದಲೇ ಹಾಕಿಸಿದರು. ದುರದೃಷ್ಟವಶಾತ್ ಫಾರೆಸ್ಟ್ ಆಫೀಸರರು ಸಿಕ್ಕಲಿಲ್ಲ. ಅವರು ಜಿಲ್ಲಾಧಿಕಾರಿಗಳು ಕರೆದ ಒಂದು ಮೀಟಿಂಗ್‌ಗೆ ಹೋಗಿದ್ದರು. ಆ ದಿನ ಅವರು ಮತ್ತೆ ಆಫೀಸಿಗೆ ಬರಲಾರರು ಎಂದು ಅಲ್ಲಿದ್ದ ಗುಮಾಸ್ತ ಹೇಳಿದ. ಪಂಚಾಯತ್ ಅಧ್ಯಕ್ಷರು ನಾವು ಫೋನ್ ಮಾಡಿ ಬರಬೇಕಿತ್ತು ಅಂತ ತುಂಬ ಮಿಡುಕಿದರು. ಕೊನೆಗೆ ಅವರೆಲ್ಲ ತಾಲ್ಲೂಕಿನಲ್ಲಿ ತಮಗೆ ಬೇರೇನೋ ಕೆಲಸವಿದೆಯೆಂದು ಹೇಳಿ ಹೊರಟುಹೋದರು. ಆದುದರಿಂದ ಮೂಸಬ್ಬನೊಬ್ಬನೇ ಬಸ್ಸು ಹಿಡಿದು ಮರಳುವುದು ಅನಿವಾರ್ಯವಾಯಿತು.

ಮುಂದೊಂದು ದಿನ ಮೂಸಬ್ಬನೊಬ್ಬನೇ ಅಲ್ಲಿಗೆ ಹೋಗಿ ಅರ್ಜಿ ಕೊಟ್ಟು ಬಂದ. ಅರ್ಜಿ ಸ್ವೀಕರಿಸಿದ ಫಾರೆಸ್ಟ್ ಆಫೀಸರರು ಇನ್ಸ್‌ಪೆಕ್ಷನ್ ಮಾಡಿ ಒಪ್ಪಿಗೆ ಕೊಡುತ್ತೇನೆ ಎಂದು ಭರವಸೆ ಇತ್ತರು. ಆದರೆ ಮೂಸಬ್ಬ ಕಾದದ್ದಷ್ಟೇ ಬಂತು. ಹಲವು ದಿನಗಳ ತನಕ ಅವರು ಇನ್ಸ್‌ಪೆಕ್ಷನ್‌ಗೆ ಬರಲೇ ಇಲ್ಲ. ಅದರಿಂದಾಗಿ ಮೂಸಬ್ಬ ನಾಲ್ಕಾರು ಬಾರಿ ಅಲ್ಲಿಗೆ ಹೋಗಿ ಬರಬೇಕಾಯಿತು. ಅವನ ಆತಂಕ ಒಂದೇ ಮಳೆಗಾಲ ಆರಂಭವಾಗುವ ಮುನ್ನ ಮರ ಕಡಿದರೆ ಆಗಬಹುದು ಎಂದು. ಚಳಿ ಏನೋ ಮುಗಿದು ಗಾಳಿ ಶಾಂತವಾಗಿತ್ತು. ಬಿಸಿಲು ಕೊರೆಯುತ್ತಾ ಮೆವ್ವೆಂದು ಎಲ್ಲವನ್ನೂ ಹರಡಿ ಕೂತಿತ್ತು. ಹಾಗಾಗಿ ಗೆಲ್ಲುಗಳೇನೂ ಹೆಂಚುಗಳ ಮೇಲೆ ಬಿದ್ದಿರಲಿಲ್ಲ. ಆದರೆ ಒಮ್ಮೆ ಮಳೆ ಆರಂಭವಾದರೆ ಪರಿಸ್ಥಿತಿ ಏನಾದೀತೆಂದು ಹೇಳಬರುವುದಿಲ್ಲ.

ಅವನು ಫಾರೆಸ್ಟ್ ಆಫೀಸಿಗೆ ಅಲೆಯುವುದನ್ನು ಕಂಡು ಯಾರೋ ಮರುಕಪಟ್ಟು 'ಫಾರೆಸ್ಟ್ ಆಫೀಸರರಿಗೆ ಒಂದು ಕವರಿನಲ್ಲಿ ಇನ್ನೂರು ರೂಪಾಯಿ ಹಾಕಿ ಕೊಟ್ಟರೆ ಕೆಲಸ ಬೇಗ ಆದೀತೆಂ'ದು ಸಲಹೆ ಮಾಡಿದರು. ಅವರು ಅರ್ಜಿಯ ವಿಲೇವಾರಿ ಮಾಡಲು ಸಮಯ ತೆಗೆದುಕೊಳ್ಳುವುದನ್ನು ಕಂಡು ಮೂಸಬ್ಬನಿಗೂ ಹಾಗೆಯೇ ಅನ್ನಿಸಿತ್ತು. ಆದುದರಿಂದ ಮರುಬಾರಿ ಹೋದಾಗ ಅವನು ಮೆತ್ತಗೆ ಆ ಕೆಲಸ ಮಾಡಿದ. ಮೂಲಧನವನ್ನೇ ಹಾಕದೆ ವ್ಯಾಪಾರ ಆರಂಭಿಸಿ ಈ ಹಂತಕ್ಕೆ ಮುಟ್ಟಿದ ಮೂಸಬ್ಬನಿಗೆ ಈ ರೀತಿ ಖರ್ಚು ಮಾಡಬೇಕಾಯಿತಲ್ಲ ಎಂದು ಬಹಳ ನೋವಾಯಿತೆನ್ನಲೇ ಬೇಕು.

ಆದರೆ ಅವನು ಕವರನ್ನು ಕೊಟ್ಟ ಎರಡು ದಿನಗಳಲ್ಲೇ ಫಾರೆಸ್ಟ್ ಆಫೀಸರರು ಮೂಸಬ್ಬನ